ಶ್ರೀ ವೈ. ರಾಮಚಂದ್ರ.—ನದನ್ಯರಿಗೆ ಒದಗಿಸಿರತಕ್ಕ ಉತ್ತರದಲ್ಲಿ free of cost ಆಗಿ ಯಾರಿಗೂ ಕೊಟ್ಟಿಲ್ಲವೆಂದು ಹೇಳಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಸರ್ಕಾರದವರು ಕೆಲವು ಸಂಸ್ಥೆಗಳಿಗೆ ನಿವೇಶನಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ನಥೆಯಮುಂದೆ ಕೊಟ್ಟಿರತಕ್ಕ ಪಟ್ಟಿಯಲ್ಲಿ ರಾಜಾಜಿನಗರದ ಬನವೇಶ್ವರ ಸಹಕಾರ ಸಂಘದವರು ಸುಮಾರು ಆರು ವರ್ಷಗಳಿಂದಲೂ ಒಂದು ನಿವೇಶನಕ್ಕಾಗಿ ಕೇಳುತ್ತಿದ್ದಾರೆಂಬುದು ವ್ಯಕ್ತವಾಗುತ್ತದೆ. ಇದುವರೆಗೂ ಅವರಿಗೆ ಕೊಡಲಿಲ್ಲ. ಕಾರಣವೇನು ?

ಶ್ರೀ ವೈ. ರಾಮಚಂದ್ರ.—ಅವರಿಗೆ ಇನ್ನೂ ಕೊಡದಿದ್ದರೆ ಒಂದು ನಿವೇಶವನ್ನು ಅವರಿಗೆ ಕೊಡಿಸಿಲಕ್ಕೆ ಪ್ರಯತ್ನ ಮಾಡುತ್ತೇವೆ. ಕೆಲವು ಕಂಡೀಷನ್ಸ್ ಕೇಳಿದ್ದೇವೆ. ಅವಿನ್ನೂ fulfil ಆಗಿಲ್ಲ.

Flood havocs in Shanthisagar valley in Channagiri taluk.

* *Q.*—324 **Sri KUNDUR RUDRAPPA** (Channagiri).—

Will the Government be pleased to state.—

(*a*) the measures taken to redress the grievances of the people of low lying lands affected by the flood havocs in Shanthisagar valley in Channagiri taluk and the amount spent in this behalf in fulfilment of the assurances given by the Government.

(*b*) whether they are aware of the frequent spillage over the Shanthisagara wasteweir and the damages caused to crops thereby ?

A.—**Sri S. NIJALINGAPPA** (Chief Minister).—

(*a*) This is under investigation by the Executive Engineer M. I. I. Dn. Shimoga.

(*b*) It is not frequent.

ಶ್ರೀ ಕುಂದೂರು ರುದ್ರಪ್ಪ.—ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರ ಕಣಿವೆ 43 ಚದುರಮೈಲಿಗಳಿವೆ. ಅಲ್ಲಿ ಪ್ರತಿವರ್ಷವೂ ಕೂಡ ಪ್ರವಾಹದ ಹಾವಳಿಯಿಂದಾಗಿ ಅಲ್ಲಿನ ಕೆರೆಗಳೆಲ್ಲಾ ತುಂಬಿ ಹೋಗಿ ಮಳೆಗಾಲದಲ್ಲಿ ನುತ್ತು ಮುತ್ತಲರುವ ಗ್ರಾಮಗಳಿಗೆರ್ಲಾ ವಿಶೇಷವಾಗಿ ಹಾನಿಯಾಗುತ್ತದೆಂಬುದು ಮನವರಿಕೆಯಾಗಿರಬಹುದು. ಆದರೆ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರ ಎಗ್ಸಿಕ್ಯುಟಿವ್ ಇಂಜನಿಯರ್ ಅವರ ಪರಿಶೀಲನೆಯಲ್ಲಿದೆ ಎಂದು ಈಗ ಹೇಳಿದ್ದಾರೆ. ಅದಕ್ಕೆ ಉತ್ತರವನ್ನು ಇನ್ನೂ ವಿವರವಾಗಿ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಶಾಂತಿಸಾಗರದ ಕೋಡಿಯ ಮೇಲ್ಭಾಗದಲ್ಲಿ ಪದೇಪದೇ ಪ್ರತಿ ವರ್ಷವೂ ನೀರು ಹರಿಯುತ್ತಿರುವುದು ಮತ್ತು ನಾಲ್ಕೈದು ವರ್ಷಗಳಿಗೊಂದು ಸಾರಿ ಕೋಡಿ ಉಕ್ಕಿ ಹರಿದು ಅದರಿಂದಾಗಿ ಬೆಳೆಗಳಿಗೆ ಲುಕ್ಸಾನು ಆಗಿರುವುದು ನಿಜ. 1956ರಲ್ಲಿ ಆ ಕೋಡಿಯ ಮೇಲೆ ನಾಲ್ಕೈದು ಇಂಚುಗಳಷ್ಟು ಜಾಸ್ತಿಯಾಗಿ ನೀರು ಹರಿದು ವಿಶೇಷವಾಗಿ ಬೆಳೆಗೆ ತೊಂದರೆಯಾಗಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಮೇಲ್ಭಾಡೆ ಶಾಂತಿಸಾಗರಕ್ಕೆ ಬರತಕ್ಕ ಹಿರೇಹಳ್ಳ ಎಂಬ ಸ್ಥಳದಲ್ಲಿ ಪ್ರವಾಹದ ಹಾವಳಿಯನ್ನು ತಪ್ಪಿಸುವುದಕ್ಕೋಸ್ಕರ ಮೇಲ್ಭಾಡೆ ಹೊಸದುರ್ಗ ತಾಲ್ಲೂಕಿಗೆ ಸೇರಿದಲ್ಲಿ ಒಂದೆರಡು ಕೆರೆಗಳನ್ನು ಕಟ್ಟಲು ಸುಮಾರು 29 ಲಕ್ಷ ರೂಪಾಯಿಗಳನ್ನು ಖರ್ಚುಮಾಡತಕ್ಕ ಒಂದು ಅಂದಾಜು ಯೋಜನೆ ನಡೆಯುತ್ತಿದೆ. ಅದಕ್ಕೆ ಬೇಕಾಗತಕ್ಕ ಅಂದಾಜು, ಪ್ಲಾನುಗಳು ಸಿದ್ಧವಾಗುತ್ತಿವೆ. ಅದು ಕಾರ್ಯರೂಪಕ್ಕೆ ಬಂದರೆ ಆ ಒಂದು ಕಷ್ಟ ತಪ್ಪೀತು. ಆದ್ದರಿಂದ ಇಲ್ಲಿ ಈ ಶಾಂತಿ ಸಾಗರದ ಕೋಡಿಯನ್ನು ಸರಿಮಾಡುವುದಕ್ಕೆ ಸುಮಾರು 12 ಲಕ್ಷ ರೂಪಾಯಿಗಳ ಒಂದು ಅಂದಾಜು ತಯಾರಾಗಿದೆ. ಆ ವಿಚಾರ ಸರ್ಕಾರದ ಗಮನದಲ್ಲಿದೆ.

ಶ್ರೀ ಕುಂದೂರು ರುದ್ರಪ್ಪ.—ಪ್ರವಾಹ ಕಾಲದಲ್ಲಿ ಈ ಕೋಡಿಯನ್ನು ಎತ್ತರಮಾಡುವುದರಿಂದ ಏನೂ ಅನುಕೂಲವಾಗುವುದಿಲ್ಲ. 12 ವರ್ಷಗಳಿಗೊಂದು ಸಲ ಕೋಡಿ ಬೀಳುತ್ತಿದ್ದುದನ್ನು ಈಗ ಪ್ರತಿವರ್ಷವೂ ಏರಿಸುತ್ತಿದ್ದಾರೆ. ಪಕ್ಕದ ಜಮೀನುಗಳು ಹಾಳಾಗದಂತೆ ಚಾನಲ್ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ. ಈ ಪ್ರವಾಹದಿಂದ ಎರಡುಮೂರು ಹಳ್ಳಿಗಳು ಮುಳುಗಡೆಯಾಗುತ್ತದೆಂದು ಹೇಳಿದರು. ಇದನ್ನು ಬಗೆಹರಿಸುವುದಕ್ಕೆ ಒಂದು ಅಂದಾಜುಮಾಡಿ 29 ಲಕ್ಷ ರೂಪಾಯಿಗಳನ್ನು ಕೇಳಿದ್ದೇವೆ. ಎಸ್ಟಿಮೇಟು ಮಂಜೂರಾಗಿದೆ. ಅದರ ಕೆಲಸವನ್ನು ಏಪ್ರೆಲ್ ತಿಂಗಳಿಗೆ ಪ್ರಾರಂಭ ಮಾಡುತ್ತೇವೆಂದು ಈಗ ಹೇಳುತ್ತಾರೆ. ಪದೇ ಪದೇ ಈ ರೀತಿ ಆಗುತ್ತಾ ಇಲ್ಲ. ಅದರ ಬಗ್ಗೆ ಇನ್‌ವೆಸ್ಟಿಗೇಷನ್ನನ್ನು ಮೈನರ್ ಇರಿಗೇಷನ್ ಆಫೀಸರ್ ನಡೆಸುತ್ತಾರೆಂದೂ ಈ ವಿಚಾರ ಮಾನ್ಯ ಸದಸ್ಯರಿಗೇ ಗೊತ್ತಿದೆಯೆಂದು ಬೇರೆ ಹೇಳುತ್ತಾರೆ. ಇಲ್ಲಾ ಆಗುತ್ತದೆಂದು ಹೇಳಬೇಕು, ಇಲ್ಲಾ ಆಗುವುದಿಲ್ಲವೆಂದು ಹೇಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ಐನಾ ಪೈನಾ ಹೀಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಶ್ನೋತ್ತರ ಕಾಲದಲ್ಲಿ ಯಾವುದೇ ಆಗಲಿ ಆಗುತ್ತದೆ, ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಏನು ವಿಚಾರವಿದೆ ಆ ಒಂದು ವಿಷಯವನ್ನು ತಿಳಿಸುವುದಕ್ಕೆ ಈ ಕಾಲವನ್ನು ಮೀಸಲಾಗಿಟ್ಟಿದ್ದಾರೆ. ಸರ್ಕಾರ ಹೌದು, ಇಲ್ಲವೆಂದು ಹೇಳುವುದನ್ನು ಬೇರೆ ಕಡೆಯಲ್ಲಿ ತಿರ್ಮಾನಮಾಡುತ್ತಾರೆ.

ಶ್ರೀ ಕುಂದೂರು ರುದ್ರಪ್ಪ.—ಹಾಗಾದರೆ ಸರ್ಕಾರ ಇಲ್ಲಿ ಹೇಳುವ ಉತ್ತರ ನಮ್ಮ ಸಮಾಧಾನಕ್ಕೋ ಅಥವಾ ಜನತೆಯ ಸಮಾಧಾನಕ್ಕೋ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರಿಗೇ ಆ ವಿಚಾರ ಗೊತ್ತಿದೆ. ಅದರಿಂದ ಕಷ್ಟವಿದೆಯೆಂಬುದು ಸರ್ಕಾರಕ್ಕೆ ಗೊತ್ತಿದೆ. ಅಲ್ಲಿ ಅಗಿಂದಾಗ್ಗೆ ತೊಂದರೆಯಾಗುತ್ತದೆ ಎಂದು ಏನಾದರೂ ಮಾಡಿ ಅದನ್ನು ಪರಿಶೀಲನೆಮಾಡಬೇಕೆಂದು ಒಂದು ಅಂದಾಜು ಮಾಡಲಾಗಿದೆ. ಅದು ಈಗಾಗಲೇ ತೀವ್ರ ಪರಿಶೀಲನೆಯಲ್ಲಿದೆ. ಆದ್ದರಿಂದ ಮಾನ್ಯ ಸದಸ್ಯರು ಆ ವಿಚಾರದಲ್ಲಿ ಅಷ್ಟಕ್ಕೆ ಸಮಾಧಾನವಾಗಬೇಕು ಎಂಬುದಾಗಿ ನನ್ನ ಉತ್ತರ.

ಶ್ರೀ ಕುಂದೂರು ರುದ್ರಪ್ಪ.—ಶಾಂತಿಸಾಗರದ ಕಣಿವೆಯ ಹತ್ತಿರ ಕೆರೆಗಳನ್ನು ಕಟ್ಟಲು 29 ಲಕ್ಷ ರೂಪಾಯಿಗಳಷ್ಟು ಒಂದು ಅಂದಾಜು ಮಂಜೂರಾಗಿದೆಯೆಂದು ಮುಖ್ಯ ಮಂತ್ರಿಗಳು ಹೇಳಿದರು. ಅದರಿಂದ ನನಗೆ ಬಹಳ ಸಂತೋಷವಾಯಿತು. ತಕ್ಷಣ ವರ್ತಮಾನ ಪತ್ರಿಕೆಯಲ್ಲಿ ಇದನ್ನು ನೋಡಿ ಮುಖ್ಯ ಮಂತ್ರಿಗಳಿಗೆ ಕೃತಜ್ಞತೆ ಹೇಳುವುದಕ್ಕೆ ಬಂದೆ ಈಗ ನೋಡಿದರೆ ಅಲ್ಲಿ ಕೆರೆ ಆಗುತ್ತದೆ, ಹಳ್ಳ ಈಗ ಕಡಮೆಯಾಗಿದೆ, ನೀರೂ ಸಹ ಕಡಮೆಯಾಗುತ್ತಿದೆಂದು ಹೇಳುವುದನ್ನು ನೋಡಿದರೆ ನಾನು ಬಹಳವಾಗಿ ನೊಂದು ಕಳಕಳಿಯಿಂದ ಒಂದು ಮಾತನ್ನು ಕೇಳುತ್ತೇನೆ. ಇದರಿಂದ ಸುಮಾರು 20 ಊರುಗಳು ಮುಳುಗಡೆಯಾಗುವುದರಿಂದ ಮತ್ತ ಇದು ನಾರ್ಯಾರು ತಾಲ್ಲೂಕುಗಳ ಪ್ರಶ್ನೆಯಾಗಿರುವುದರಿಂದ ಸರ್ಕಾರದವರು ಮನಸ್ಸು ಮಾಡಿ ಈ ಯೋಜನೆ ಮಾರ್ಚ್‌ನೊಳಗೆ ಆಗುತ್ತದೆಂದು ಹಿಂದೆ ಹೇಳಿದ್ದರು. ಮಾರ್ಚ್—ಏಪ್ರೆಲ್ ಹೊತ್ತಿಗೆ ಆ ಯೋಜನೆಯನ್ನು ಪುರು ಮಾಡುತ್ತೇವೆಂದು ಈಗ ಹೇಳುತ್ತಿದ್ದಾರೆ. ಇದು ನನಗೆ ಅನುಮಾನವಾಗಿದೆ ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಇನ್ನೊಂದುಸಾರಿ ನಮ್ಮ ತಾಲ್ಲೂಕು ಜನರಿಗೆ ತೃಪ್ತಿ ಬರುವಂತೆ ಉತ್ತರ ಹೇಳುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಅವರ ಕ್ಷೇತ್ರಕ್ಕೆ ಹೋಗಿ ಈ ಕೆಲಸ ಜಾಗ್ರತೆಯಾಗಿ ಆಗುತ್ತದೆಂದು ಹೇಳಬಹುದು.

Salar Jung Sugar Factory.

*Q.—349. Sri VEERABHADRAPPA ERAPPA (Yelburga).—

Will the Government be pleased to state :—

(*a*) when the Salar Jung Sugar Factory in Munirabad was started;

(*b*) whether any lands were granted by the Government to the said factory at the time of its starting and if so the extent and cost of lands so granted ;